7. ಶಾಸನ ರಚನೆ

I. ವಿಧೇಯಕವನ್ನು ಹಿಂದಕ್ಕೆ ಪಡೆಯುವುದು

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ (ತಿದ್ದುಪಡಿ) ವಿಧೇಯಕ 2014

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕು ಸಂಸದೀಯ ವ್ಯವಹಾರ ಹಾಗೂ ಶಾಸನ, ಪಶುಸಂಗೋಪನೆಯ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):– ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವನೆ ಹೀಗಿದೆ: 2014 ನೇ ಸಾಲಿನ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳದೆ ಹಿಂದಕ್ಕೆ ಪಡೆಯಲು ಅನುಮತಿ ನೀಡುವುದು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ ಹಾಗೂ ವಿಧೇಯಕವನ್ನು ಹಿಂದಕ್ಕೆ ಪಡೆಯಲಾಗಿದೆ.

(ಗೊಂದಲ)

(ವಿಧೇಯಕವನ್ನು ಹಿಂದಕ್ಕೆ ಪಡೆಯಲಾಯಿತು)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಏಕೆ ವಾಪಸ್ ತೆಗೆದುಕೊಂಡಿರಿ ಎಂಬುದನ್ನು ಹೇಳಿ.

ಅಧ್ಯಕ್ಷರು:– ಅದೆಲ್ಲಾ ಬೇಡ ಬಿಡಿ.

ಶ್ರೀ ಆರ್. ಅಶೋಕ್:– ಮಾನ್ಯ ಸಚಿವರೆ, ಈ ಬಿಲ್ ಅನ್ನು ತಾವು ಮನಸ್ಸು ಪೂರ್ವಕವಾಗಿ ಹಿಂದಕ್ಕೆ ಪಡೆದಿದ್ದೀರೋ ಅಥವಾ ಬಲವಂತದಿಂದ ತೆಗೆದುಕೊಂಡಿದ್ದೀರಾ? ತಾವು ಒತ್ತಡದಿಂದ ವಾಪಸ್ಸು ತೆಗೆದುಕೊಂಡಿದ್ದರೆ.. . .

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಬಿಜೆಪಿಯವರಿಗೆ ಹೆದರಿಕೊಂಡು ತೆಗೆದುಕೊಂಡಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ:– Government is a continuous process.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಸಹಕಾರ ಸಚಿವರು):– ಇಲ್ಲಿ ಚರ್ಚೆ ಅನಾವಶ್ಯಕ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಕೆಲವೊಮ್ಮೆ ನೀವು ಮಾಡಿದಂತಹ ತಪ್ಪುಗಳು ನಮ್ಮ ತಲೆ ಮೇಲೆ ಬರುತ್ತದೆ ....

ಅಧ್ಯಕ್ಷರು:– ಆಯಿತು ಬಿಡಿ.

ಶ್ರೀ ಟಿ.ಬಿ. ಜಯಚಂದ್ರ:– ಈ ಬಗ್ಗೆ ನಾನು explain ಮಾಡಲೇ?

ಅಧ್ಯಕ್ಷರು:– ಏತಕ್ಕಾಗಿ ತಾವು ಕೆಲಸಕ್ಕೆ ಬಾರದೆ ಇರುವಂತಹ ವಿಚಾರವನ್ನು ಮಾತನಾಡುತ್ತೀರಿ?

ಶ್ರೀ ಟಿ.ಬಿ. ಜಯಚಂದ್ರ:– I am prepared.

ಅಧ್ಯಕ್ಷರು:– ಈ ಬಿಲ್ ಅನ್ನು ಹಿಂದಕ್ಕೆ ಪಡೆದ ಮೇಲೆ ಆಯಿತಲ್ಲಾ ಬಿಡಿ.

ಶ್ರೀ ಟಿ.ಬಿ. ಜಯಚಂದ್ರ:– ಹಿಂದೆ ಮಾಡಿರುವಂತಹ ತಪ್ಪುಗಳೇನಿದೆ. ಅವೆಲ್ಲವನ್ನು ಹೇಳುವುದಕ್ಕೆ ತಯಾರಿದ್ದೇನೆ.

ಅಧ್ಯಕ್ಷರು:– ಮಾನ್ಯ ಮಂತ್ರಿಗಳೆ, ಇಲ್ಲಿ ಅನಾವಶ್ಯಕವಾಗಿರುವುದನ್ನು ತಾವು ಬಿಟ್ಟುಬಿಡಿ. ಇದನ್ನು ವಾಪಸ್ಸು ತೆಗೆದುಕೊಂಡು ಆಗಿದೆ. ಬಿಡಿ.

ಶ್ರೀ ಟಿ.ಬಿ. ಜಯಚಂದ್ರ:– ಈ ವಿಚಾರದಲ್ಲಿ ಮಸೂದೆ ತಂದು ನಿಯಂತ್ರಣ ತರಬೇಕೆಂಬ ಬಗ್ಗೆ ನಮ್ಮ ಉದ್ದೇಶ ಇರಲಿಲ್ಲ. ಆದರೆ ಸರ್ವೋಚ್ಚ ನ್ಯಾಯಾಲಯದಲ್ಲಿ ಕೇಸ್ ಇರುವಂಥದ್ದು .....

(ಗೊಂದಲ)

ಶ್ರೀ ಸಿ.ಟಿ. ರವಿ:– ಈಗ ಮುಖ ಉಳಿಸಿಕೊಳ್ಳುವಂತಹ ಪ್ರಯತ್ನ ಮಾಡುವುದು ಬೇಡ. ಅದನ್ನು ತೆಗೆದುಹಾಕಿ ಆಯಿತು, ಬಿಟ್ಟುಬಿಡಿ.

ಶ್ರೀ ಟಿ.ಬಿ. ಜಯಚಂದ್ರ:– ಇವತ್ತೂ ಕೂಡ ಕೇಸ್ ನಡೆಯುತ್ತದೆ.

(ಗೊಂದಲ)

ಅಧ್ಯಕ್ಷರು:– ಆಯಿತು. ಈಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ 2015 ಅನ್ನು ಮಾನ್ಯ ಮುಖ್ಯಮಂತ್ರಿಯವರು ಮಂಡಿಸುವುದು.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಈ ಬಿಲ್ಲು small ಇದೆ. ನಾನು ನಿನ್ನೆಯೂ ಕೂಡ ಹೇಳಿದ್ದೇನೆ. ಮೂರು ಬಿಲ್ಲುಗಳನ್ನು ತರುತ್ತೇವೆಂದು ಬಿಎಸಿ ಮೀಟಿಂಗ್‌ನಲ್ಲಿ ಹೇಳಿದ್ದರು. ಅಜೆಂಡಾದಲ್ಲಿ ಲಿಸ್ಟ್ ಅನ್ನು ಸಹ ಇಟ್ಟಿದ್ದರು. ಇದನ್ನು ಬಿಟ್ಟರೆ ಯಾವುದೂ ಇಲ್ಲವೆಂದು ಹೇಳಿದ್ದರು. ಅವತ್ತು ಕೂಡ ನಾನು specific ಆಗಿ ಹೇಳಿದ್ದೇನೆ. ನೀವು ಏನಾದರೂ ತರುವುದು ಇದ್ದರೆ, ಒಂದು ವಾರ ಮುಂಚಿತವಾಗಿ

ಮಾಹಿತಿ ಕೊಡಿ ಎಂದು ಹೇಳಿದ್ದೆ. ಬಿಲ್‌ನ ಡ್ರಾಫ್ಟ್ ಕೊಡಿ ಎಂದು ಸಹ ಹೇಳಿದ್ದೆ. ಆದರೂ ಕೂಡ ಅವಗಣನೆ ಮಾಡಿ ಈ ಬಿಲ್ ಅನ್ನು ಈ ದಿನ ಬೆಳಿಗ್ಗೆ ತೆಗೆದುಕೊಂಡು ಬಂದಿದ್ದಾರೆ. ನಿನ್ನೆಯೂ ಕೂಡ ಒಂದು ಬಿಲ್ ಅನ್ನು ತೆಗೆದುಕೊಂಡು ಬಂದಿದ್ದರು. ಈ ತರಹ ತರಾತುರಿಯಲ್ಲಿ ತರುವಂತಹದ್ದು ಸರಿಯಲ್ಲ. ಏನಾದರೂ ತುರ್ತು ಇದ್ದರೆ ಅದಕ್ಕೆ ನಮ್ಮ ಅಡ್ಡಿ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಇದು ಕುಡಿಯುವ ನೀರಿನ ವಿಚಾರ ಆಗಿದೆ.

ಶ್ರೀ ಜಗದೀಶ್ ಶೆಟ್ಟರ್:– ಇಂತಹ ಒಂದು ಬಿಲ್ ತರುವ ಬಗ್ಗೆ ನಿರೀಕ್ಷೆ ಮಾಡಬೇಕಲ್ಲವೇ? ಆ ಇಲಾಖೆಯವರು ಈ ಬಗ್ಗೆ ತಮಗೆ ಹೇಳಬೇಕಲ್ಲಾ? ತಾವು urgent ಇದ್ದರೆ ಮಾಡಿ, ನಾವು ಬೇಡವೆಂದು ಹೇಳುವುದಿಲ್ಲ. ತರಾತುರಿಯಿಂದ ಈ ತರಹ ಮಾಡುವುದು ಸರಿಯಲ್ಲ. ಆ ಪದ್ಧತಿ ಬೇಡವೆಂದು ಹೇಳುತ್ತಿದ್ದೇನೆ. ಈ ಬಗ್ಗೆ BAC meeting ನಲ್ಲಿ discussion ಆಗಿದೆ.

ಶ್ರೀ ಟಿ.ಬಿ. ಜಯಚಂದ್ರ:– ಇದೊಂದು ಬಹಳ urgent ಆಗಿ ಇರುವಂತಹದ್ದು ಆಗಿದೆ. ಇದು ಕುಡಿಯುವ ನೀರಿಗೆ ಸಂಬಂಧಪಟ್ಟಿರುವುದು ಆಗಿದೆ. ಒಂದು ಲಕ್ಷ ರೂಪಾಯಿಗಳಿಂದ 5 ಲಕ್ಷ ರೂಪಾಯಿಗಳವರೆಗೆ ಮಿತಿಯನ್ನು ಏರಿಸುವದಕ್ಕೋಸ್ಕರ, KTPP Act ಗೆ amendment ಅನ್ನು ತಂದಿರುವುದಾಗಿದೆ. ಇದು ಕುಡಿಯುವ ನೀರಿಗೋಸ್ಕರವಾಗಿ ಮಾಡಿರುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ತಾವು ಕುಡಿಯುವ ನೀರಿಗೋಸ್ಕರ ತಂದಿರುವ ಬಿಲ್ ಆಗಿರುವುದರಿಂದ ಇದನ್ನು ಮಾಡಿಬಿಡಿ. ಅಲ್ಲಿ ಕುಡಿಯುವ ನೀರಿಗಾಗಿ ಬಹಳ ತೊಂದರೆಯಾಗುತ್ತಿದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಇಲ್ಲಿ ಚರ್ಚೆ ಅನಾವಶ್ಯಕವಾಗಿರುತ್ತದೆ.

ಶ್ರೀ ಟಿ.ಬಿ. ಜಯಚಂದ್ರ:– Water Supply Scheme complete ಮಾಡಿದ ನಂತರದ implementation ನಲ್ಲಿ pattern change ಆಯಿತು. ಅದನ್ನು 5 ಲಕ್ಷ

ರೂಪಾಯಿಗಳವರೆವಿಗೂ ಕೂಡ limit raise ಮಾಡುವುದಕ್ಕೋಸ್ಕರ ಒಂದು exemption ಕೊಡಲು ಇದನ್ನು ತಂದಿದ್ದೇನೆ. ಇದರಿಂದ ಕುಡಿಯುವ ನೀರಿಗೆ ಬಹಳ ತೊಂದರೆಯಾಗುತ್ತಿತ್ತು ಅದಕ್ಕೋಸ್ಕರ ಈ ಬಿಲ್ ಅನ್ನು ತಂದಿದ್ದೇವೆ.

ಅಧ್ಯಕ್ಷರು:– O.K.

II. ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(ii) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ 2015 ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕು ಸಂಸದೀಯ ವ್ಯವಹಾರ ಹಾಗೂ ಶಾಸನ, ಪಶುಸಂಗೋಪನೆಯ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):– ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪ ಮಂಡಿಸಲಾಯಿತು.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಯಿತು. ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2015ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ